



■ ಅನು ಬೆಳ್ಳೆ

## ರಾಮಸ್ವಾಮಿಯನ್ನು ಪ್ರಶ್ನಿಸಿದ ಮೇನಕಾ

‘ಈ ಹೊತ್ತಿಗೆ ಇಲ್ಲಿಗೆ ಬರೋ ಉದ್ದೇಶವೇನಿತ್ತು?’ ಆ ನಡುವೆಯೂ ಧೈರ್ಯದಿಂದ ಅವನನ್ನು ಪ್ರಶ್ನಿಸಿದಳು. ಅಷ್ಟರಲ್ಲಿ ಇನ್ನೊಬ್ಬನೂ ಒಳಗೆ ಪ್ರವೇಶ ಪಡೆದಿದ್ದ. ಆತ ಅಪರಿಚಿತ. ಮೇನಕಾಳ ದೃಷ್ಟಿ ಅವನತ್ತ ಹರಿಯಿತು.

‘ಇಂತಹ ಅಪರಾತ್ರಿಯಲ್ಲಿ ಇಲ್ಲಿಗೆ ಬರುವ ಉದ್ದೇಶವೇನು?’ ಮತ್ತೊಮ್ಮೆ ಕಾಕುಟ್ಟನನ್ನು ಪ್ರಶ್ನಿಸಿದಳು.

‘ಅಗತ್ಯವಿತ್ತು ಬಂದೆ. ಅಕ್ಕ ಫೋನ್ ಮಾಡಿದ್ಲು. ನೀನೂ ಕೂಡ ಕಣ್ಮರೆಯಾಗಿದೀಂತ. ಅದಕ್ಕೆ ಹೆದರಿದೋನು ಇಲ್ಲಿಗೆ ಬಂದೆ, ನಿನ್ನ ಹುಡುಕಾಡೋದಿಕ್ಕೆ. ಆದ್ರೆ ನೀನಿಲ್ಲಿ ಮತ್ತೊಮ್ಮೆ ನಿನ್ನ ಜನುಮದಿನದ ಪಾರ್ಟಿಗಾಗಿ ಅರೇಂಜ್ ಮಾಡಿರೋ ಹಾಗಿದೆ?’ ಕತ್ತೆತ್ತಿ ಸುತ್ತಲೂ ನೋಡಿ ವ್ಯಂಗ್ಯದ ನಗು ನಕ್ಕ. ಮೇನಕಾಳ ಕೋಪ ನೆತ್ತಿಗೇರಿತು. ಆತ ಕಾಶಮ್ಮನ ದೂರದ ಸಂಬಂಧಿಯಾಗಿರುವುದರಿಂದ ತನ್ನ ಜೀವಕ್ಕೆ ಅಪಾಯ ತಂದೊಡ್ಡಲಾರನೆನ್ನುವ ಧೈರ್ಯ ಅವಳಿಗೆ. ಹಾಗೇನಾದರೂ ಅವನು ವಿರೋಧವಾಗಿ ನಡೆದುಕೊಂಡರೆ ಲ್ಯಾಂಡ್ ಲೈನ್ ಫೋನ್‌ನಿಂದ ಇನ್ಸ್‌ಪೆಕ್ಟರ್ ರಾಜಧಾನಿಗೆ ತಿಳಿಸುವುದೆಂದು ನಿರ್ಧರಿಸಿದಳು.

‘ಚಿಕ್ಕಮ್ಮಾನಿಗೆ ಅದೊಂದು ಬೇನೆ. ಇನ್ನು ನನ್ನ ತಂದೆಗೂ ಅವರು ಹೇಳೋದು ಅದನ್ನೇ... ಅವ್ರು ಕೆಲಸ ನಿಮಿತ್ತ ಹೈದರಾಬಾದ್‌ಗೆತೆರಳಿದ್ದಾರೆ. ಆಗ ಇನ್ನೊಮ್ಮೆ ನಿಮಗೆ ಕರೆ ಬರುತ್ತೆ. ನೀವು ಅನಗತ್ಯ ಓಡೋಡಿ ಬನ್ನಿ’

ಅವಳ ಮಾತಿಗೆ ಸೆಟೆದು ನಿಂತ ಕಾಕುಟ್ಟ. ಅವಳ ಮಾತುಗಳು ಇಷ್ಟವಾಗದಂತೆ ಮುಖ ಸಿಂಡರಿಸಿ ನಕ್ಕ.

‘ನೀನು ಏನೇ ಅನ್ನು. ಬಾಳಾ ಚಾಲಾಕಿನ ಹುಡುಗಿ ನೀನು. ಲಹರಿಯ ಬಗ್ಗೆ ನಿಂಗೆ ಎಷ್ಟಾದರೂ ಅಷ್ಟಕಷ್ಟೆ ಅನ್ನುವುದು ನನಗೆ ಗೊತ್ತು. ಅಕ್ಕನೂ ಇದೇ ಮಾತನ್ನು ಹೇಳಿದ್ದಾಳೆ. ನೀನು ಎಲ್ಲಿ ಅಡಗಿ ಕೂತ್ರೂ ನಾನು ಹುಡುಕೋ ಆಸಾಮಿ’

‘ನಾನಿಲ್ಲಿರೋ ವಿಷ್ಯ ಯಾರು ತಿಳಿಸಿದ್ರು ನಿಮ್ಗೆ?’

‘ಅದೇ ಅಂದ್ನಲ್ಲಾ, ನಂಗೆ ಯಾರೂ ಹೇಳ್ಬೇಕಾಗಿಲ್ಲ. ನೀನು ಎಲ್ಲಿದ್ರೂನೂ ನಾನು ಹುಡುಕೋನು. ಬಂಗಲೆಯಲ್ಲಿಲ್ಲಾಂದ್ರೆ ನೀನು ಎಲ್ಲಿಗೆ ಹೋಗ್ತಿ? ಫಾರ್ಮ್ ಹೌಸ್‌ನಲ್ಲಿರ್ತಿ. ನಿನ್ನ ತಂಗಿ ಲಹರಿ ಮಾಡ್ತಿದ್ದುದು ಅದೇ. ಅದೇ ಅವಳ ಕಣ್ಮರೆಗೆ ಕಾರಣಾಂತ ಪೊಲೀಸ್‌ನವರು ಅಭಿಪ್ರಾಯಪಟ್ಟಿದ್ದಾರೆ. ಪೊಲೀಸರ ಒಂದು ಕಣ್ಣು ನಿನ್ನ ಮೇಲೂ ಇದೆ. ನೀನೇನಾದ್ರೂ ಆಟ ಕಟ್ಟಿದ್ರೆ ಜಾಗ್ರತೆ’ ಎಚ್ಚರಿಕೆಯ ಮಾತುಗಳನ್ನು ಹೇಳಿ ಗಂಭೀರ ಮುಖ ಮಾಡಿ ಒಳಗಿನ ಕೋಣೆಯನ್ನೆಲ್ಲಾ ನೋಡಿದ.

ಅಲ್ಲಿಯ ಅದ್ದೂರಿಯನ್ನು ಕಂಡು ಹುಬ್ಬುಗಳನ್ನೇರಿಸಿ ನಕ್ಕು ಅವಳತ್ತ ಬಂದ.

‘ಭಾರೀ ಗ್ರ್ಯಾಂಡಾಗಿ ಪಾರ್ಟಿ ಅರೇಂಜ್ ಆಗಿದೆ. ಇಲ್ಲಿಗೆ ಈ ದಿನ ಬರೋರು ಯಾರು?’

ಅವನ ಮಾತು ಹಿಡಿಸದೆ ಅದೇ ಸಿಡುಕಿನ ದನಿಯಲ್ಲಿ ಹೇಳಿದಳು.

‘ಅದೆಲ್ಲ ನಿಂಗ್ಯಾಕೆ? ನಿನ್ನ ಕೆಲಸ ಏನು ಅದನ್ನು ನೋಡ್ಕೋ’ ಮುಖಕ್ಕೆ ಹೊಡೆದಂತೆ ಮಾತಾಡಿದಾಗ ಕಾಕುಟ್ಟ ಕುಗ್ಗಿದ.

‘ನನಗೆ ಅಗತ್ಯ ಇದೆ. ಯಾಕಂದ್ರೆ ಲಹರಿಯನ್ನು ಪ್ರೀತಿಸಿ ಮೋಸ ಮಾಡ್ದ ಹುಡುಗನನ್ನು ಇವತ್ತು ಹುಡುಕಾಡ್ದೆ. ಹಾಗೆ ನಿನ್ನ ಪ್ರೀತಿಸೋ ಹುಡುಗನನ್ನು ಪತ್ತೆ ಹಚ್ಚಿ